**ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:22-09-2023 ರಂದು ನಡೆಸಲಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ-2013 ರ ಸೆಕ್ಷನ್ 26 ರನ್ವಯ ರಚಿಸಿರುವ "ರಾಜ್ಯ ಮೇಲ್ವಿಚಾರಣಾ ಸಮಿತಿ" 6ನೇ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರು:-**

1. ಡಾ|| ಹೆಚ್.ಸಿ.ಮಹಾದೇವಪ್ಪ, ಮಾನ್ಯ ಅಧ್ಯಕ್ಷರು ಹಾಗೂ ಸಚಿವರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಬೆಂಗಳೂರು.
3. ಶ್ರೀ ಕೆ.ಎಸ್.ಬಸವಂತಪ್ಪ, ಮಾನ್ಯ ಶಾಸಕರು, ಮಾಯಕೊಂಡ ವಿಧಾನಸಭಾ ಕ್ಷೇತ್ರ.
4. ಶ್ರೀ ಎನ್.ಶ್ರೀನಿವಾಸ, ಮಾನ್ಯ ಶಾಸಕರು, ನೆಲಮಂಗಲ ವಿಧಾನಸಭಾ ಕ್ಷೇತ್ರ.
5. ಡಾ|| ಇ.ವೆಂಕಟಯ್ಯ, ಸಲಹೆಗಾರರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ, ನೋಡಲ್ ಏಜೆನ್ಸಿ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು.
8. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
9. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಪೊಲೀಸ್ ಇಲಾಖೆ ರವರ ಪರವಾಗಿ Assistant Inspecting General (AIG) Crime, ಪೊಲೀಸ್ ಇಲಾಖೆ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ (ಒಳಾಡಳಿತ) ರವರ ಪರವಾಗಿ ಸರ್ಕಾರದ ಉಪ ಕಾರ್ಯದರ್ಶಿಗಳು, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರುರವರ ಪರವಾಗಿ ಸರ್ಕಾರದ ಅಪರ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ).
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರ ಪರವಾಗಿ ಸರ್ಕಾರದ ಉಪ ಕಾರ್ಯದರ್ಶಿಗಳು, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರುರವರ ಪರವಾಗಿ ನಿರ್ದೇಶಕರು, ಕುಟುಂಬ ಕಲ್ಯಾಣ ಇಲಾಖೆ.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಬೆಂಗಳೂರುರವರ ಪರವಾಗಿ ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
15. ಸರ್ಕಾರದ ಉಪ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
16. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪರವಾಗಿ ವಿಶೇಷ ಆಯುಕ್ತರು.
17. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ರವರ ಪರವಾಗಿ ಪ್ರಧಾನ ಅಭಿಯಂತರರು, ಜಲಮಂಡಳಿ.
18. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಮಂಡಳಿ ರವರ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಮಂಡಳಿ, ಬೆಂಗಳೂರು.

19. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು.
20. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು.
21. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪರವಾಗಿ ಜಂಟಿ ನಿರ್ದೇಶಕರು. (ಆಡಳಿತ)
22. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಬೆಂಗಳೂರು.
23. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ಇಲಾಖೆ, ಬೆಂಗಳೂರು ರವರ ಪರವಾಗಿ ಸಹಾಯಕ ವ್ಯವಸ್ಥಾಪಕರು.
24. ಸಹಾಯಕ ಜನರಲ್ ಮ್ಯಾನೇಜರ್, ಎಸ್.ಎಲ್.ಬಿ.ಸಿ ಸೆಕ್ಷನ್, LB&RRB ವಿಂಗ್, ಕೆನರಾ ಬ್ಯಾಂಕ್.
25. ಸರ್ಕಾರದ ಜಂಟಿ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
26. ಶ್ರೀ ಡಿ.ಆರ್.ರಾಜು, ನಾಮ ನಿರ್ದೇಶಿತ ಸದಸ್ಯರು, ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ.
27. ಡಾ. ಕೆ.ಬಿ.ಓಬಲೇಶ್, ನಾಮ ನಿರ್ದೇಶಿತ ಸದಸ್ಯರು, ರಾಜ್ಯ ಮಟ್ಟದ ಸಮೀಕ್ಷಾ ಸಮಿತಿ.
28. ಶ್ರೀಮತಿ ಪದ್ಮ, ನಾಮ ನಿರ್ದೇಶಿತ ಸದಸ್ಯರು, ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ.
29. ಶ್ರೀಮತಿ ನರ್ಮದ, ನಾಮ ನಿರ್ದೇಶಿತ ಸದಸ್ಯರು, ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ.
30. ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು.

* * *

ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ರವರು ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರನ್ನು, ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ನಾಮ ನಿರ್ದೇಶಿತ ಸದಸ್ಯರನ್ನು, ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿ, ಮಾನ್ಯ ಅಧ್ಯಕ್ಷರ ಅನುಮತಿಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ-2013ರ ಸೆಕ್ಷನ್ 26 ರನ್ವಯ ರಾಜ್ಯ ಮೇಲ್ವಿಚಾರಣಾ ಸಮಿತಿಯು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ನಗರಾಭಿವೃದ್ಧಿ ಸಚಿವರ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರುಗಳ ನೇತೃತ್ವದಲ್ಲಿ ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳ ಹಾಗೂ ನಾಮ ನಿರ್ದೇಶಿತ ಸದಸ್ಯರುಗಳನ್ನು ಒಳಗೊಂಡಂತೆ ನಡೆಯುವ ಸಭೆಯಾಗಿರುತ್ತದೆ. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳು ಅಂತರಾಷ್ಟ್ರೀಯ ಸಮಸ್ಯೆಯಾಗಿದ್ದು, ಈ ಬಗ್ಗೆ ಕಟ್ಟು ನಿಟ್ಟಿನ ತೀರ್ಮಾನಗಳನ್ನು ಕೈಗೊಳ್ಳಲು ಸದಸ್ಯರುಗಳಾದ ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅಪರ/ಪ್ರಧಾನ/ಕಾರ್ಯದರ್ಶಿಗಳ ಉಪಸ್ಥಿತಿಯು ಬಹುಮುಖ್ಯವಾಗಿದ್ದು, ಸಮಿತಿಯ ನಿಯಮಗಳ ಅನ್ವಯ 12 ದಿನಗಳ ಮುಂಚಿತವಾಗಿಯೇ ಸಭೆಯ ಮಾಹಿತಿಯನ್ನು ಸಭಾ ಸೂಚನಾದೊಂದಿಗೆ ಎಲ್ಲರಿಗೂ ಕಳುಹಿಸಿಕೊಡಲಾಗಿದ್ದರೂ ಸಹ ಪ್ರಮುಖ ಅಂಶಗಳನ್ನು ಚರ್ಚಿಸಲು ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಅನುಪಸ್ಥಿತಿ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು. ಸದರಿ ಅಧಿಕಾರಿಗಳಿಗೆ ಕಡ್ಡಾಯವಾಗಿ ಇನ್ನೂ ಮುಂದೆ

- ಪ್ರಸ್ತುತ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಘಟನೆಗಳು ಸಂಭವಿಸಿದರೆ ಅಂತಹ ಭಾವ ಚಿತ್ರಗಳನ್ನು ಸ್ವಚ್ಛತಾ ಆಪ್‌ನಲ್ಲಿ ಜಿಲ್ಲಾಧಿಕಾರಿಗಳ ಲಾಗಿನ್ ನಿಂದ ಆಪ್ ನಲ್ಲಿ ಅಪಲೋಡ್ ಮಾಡಿದರೆ ಕೇಂದ್ರ ಸರ್ಕಾರವು ಪುರಸ್ಕರಿಸುತ್ತಾರೆಂದು ತಿಳಿಸಿದರು.

- ಅಲ್ಲದೇ, ಈಗಾಗಲೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ 2927 ಅರ್ಜಿಗಳಿಗೆ ಒಂದು ಬಾರಿ ನಗದು ಸಹಾಯ (OTCA) ಮಂಜೂರು ಮಾಡಿದ್ದು, ಉಳಿದ 4556 ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಒಂದು ಬಾರಿ ನಗದು ಸಹಾಯ (OTCA) ನೀಡಲು ಅನುದಾನದ ಕೊರತೆ ಇದ್ದು, ಸುಮಾರು ರೂ. 18.5 ಕೋಟಿ ಅನುದಾನದ ಅವಶ್ಯಕತೆ ಇರುವುದಾಗಿ ಸಭೆಗೆ ತಿಳಿಸಲಾಯಿತು.

- ಶ್ರೀ ಇ.ವೆಂಕಟಯ್ಯ, ಸಲಹೆಗಾರರು ರವರು ಮಾತನಾಡುತ್ತಾ, ಈ ಸಂಬಂಧ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವತಿಯಿಂದ ಈಗಾಗಲೇ ಒದಗಿಸಲಾಗುತ್ತಿರುವ ಇತರೇ ಸೌಲಭ್ಯಗಳೊಂದಿಗೆ ಒಂದು ಬಾರಿ ನಗದು ಸಹಾಯ (OTCA) ಇದನ್ನು ಸಹ ಸೇರಿಸಿ Convergence ಮಾಡಿ One Time Grant ಮಂಜೂರು ಮಾಡಬಹುದಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಲಾಯಿತು.

- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಸದರಿ ಎಲ್ಲಾ ಸೌಲಭ್ಯಗಳನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವತಿಯಿಂದ Convergence ಮಾಡಿ ಒದಗಿಸುವ ಸಂಬಂಧ ಸುಮಾರು ರೂ. 70 ಕೋಟಿ ಅನುದಾನದ ಅವಶ್ಯಕತೆ ಬರುವುದಾಗಿ ಸಭೆಗೆ ತಿಳಿಸಲಾಯಿತು.

- ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡುತ್ತಾ, ಗುರುತಿಸಲಾದ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿಯನ್ನು ವಿತರಿಸಿದಲ್ಲಿ, ಸದರಿಯವರಿಗೆ ಮುಂದಿನ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಈ ಬಗ್ಗೆ ಕಟ್ಟುನಿಟ್ಟಿನ ಸೂಚನೆ ನೀಡುವಂತೆ ಕೋರಲಾಯಿತು.

**ತೀರ್ಮಾನ:**

- ರಾಜ್ಯದಲ್ಲಿ ಒಟ್ಟು 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು 2927 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕೇಂದ್ರ ಸರ್ಕಾರದಿಂದ ಗುರುತಿನ ಸಂಖ್ಯೆಯನ್ನು ನೀಡಿರುತ್ತಾರೆ. ಇದರಲ್ಲಿ ಜಿಲ್ಲಾಧಿಕಾರಿಗಳು ಅನುಮೋದಿಸಿ ರಾಜ್ಯ ಸರ್ವೇ ಸಮಿತಿಗೆ ಸಲ್ಲಿಸದೆ ನೇರವಾಗಿ 86 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು NSKFDC (National Safai Karmachari Financial Development Corporation) ಗೆ ಸಲ್ಲಿಸಿರುತ್ತಾರೆ. ಇದರಿಂದ ಸರ್ವೇ ಸಮಿತಿ ಅನುಮೋದಿಸಿರುವ 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲಿ NSKFDC ಇಂದ 2841 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮಾತ್ರ ಒಟಿಸಿಎ (OTCA) ದೊರೆತಿರುತ್ತದೆ ಬಾಕಿ ಉಳಿದಿರುವ ಒಟ್ಟು 4650 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮ್ಯಾನ್‌ಹೋಲ್/ತೆರೆದ ಚರಂಡಿ/ ಸೆಪ್ಟಿಕ್ ಟ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವ ಸಮಯದಲ್ಲಿ ಮೃತಪಟ್ಟ ಕಾರ್ಮಿಕರ ಅವಲಂಭಿತ 76 ಕುಟುಂಬದವರಿಗೂ ಒಟ್ಟು 4726 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕರ್ನಾಟಕ

ನಡೆಯುವ ಸಭೆಗಳಿಗೆ ಹಾಜರಾಗಲು ನೋಟಿಸ್ ನೀಡುವಂತೆ ಹಾಗೂ ಸಮಿತಿಯಲ್ಲಿ ನಿರ್ದೇಶಿಸಿರುವ ಸದಸ್ಯರೇ ಕಡ್ಡಾಯವಾಗಿ ಸಭೆಗೆ ಹಾಜರಾಗಲು ಕ್ರಮ ಕೈಗೊಳ್ಳುವಂತೆ ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಸದಸ್ಯ ಕಾರ್ಯದರ್ಶಿಗಳಿಗೆ ತಿಳಿಸಿದರು.

**ವಿಷಯ: 1. ದಿನಾಂಕ:09-06-2022 ರಂದು ನಡೆದ " ರಾಜ್ಯ ಮೇಲ್ವಿಚಾರಣಾ ಸಮಿತಿ" 5ನೇ ಸಭೆಯ ನಡವಳಿಯ ಮೇಲೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮದ ವಿವರ ಹಾಗೂ ಅನುಪಾಲನಾ ವರದಿಯನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ಅನುಮೋದನೆಗೆ ಕೋರಲಾಯಿತು.**

**ತೀರ್ಮಾನ: ದಿನಾಂಕ: 09.06.2022 ರಂದು ನಡೆದ "ರಾಜ್ಯ ಮೇಲ್ವಿಚಾರಣಾ ಸಮಿತಿ" 5ನೇ ಸಭೆಯ ನಡವಳಿಯ ಅನುಪಾಲನ ವರದಿಯನ್ನು ಅನುಮೋದಿಸಲಾಯಿತು.**

**ವಿಷಯ: 2 ರಾಜ್ಯದಲ್ಲಿ ಗುರುತಿಸಲ್ಪಟ್ಟ ಒಟ್ಟು 7483 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪೈಕಿ ಕೇಂದ್ರ ಸರ್ಕಾರದಿಂದ 2927 ಜನರಿಗ ಒಂದು ಬಾರಿ ನಗದು ಸಹಾಯ (OTCA) ಮಂಜೂರಾಗಿದ್ದು ಇನ್ನುಳಿದ 4566 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕರ್ನಾಟಕ ಸರ್ಕಾರ, ಸಮಾಜ ಕಲ್ಯಾಣ ಇಲಾಖೆಯಿಂದ ಗುರುತಿನ ಸಂಖ್ಯೆ ಚೀಟಿ ನೀಡಬೇಕು ಹಾಗೂ ಒಂದು ಬಾರಿ ನಗದು ಸಹಾಯ (OTCA) ಮಂಜೂರು ಮಾಡಬೇಕು.**

**ಚರ್ಚೆ:**

- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013 ರ ನಂತರ ಯಾವುದೇ ಕಾರ್ಮಿಕರು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸ ನಿರ್ವಹಿಸದಂತೆ ನಿಷೇಧಿಸಲಾಗಿರುತ್ತದೆ. ಈಗಿದ್ದರೂ ಹಾಗೂ ಸಕ್ಕಿಂಗ್ ಯಂತ್ರಗಳು ಇದ್ದರೂ ಸಹ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು NGO'S ತಂಡವು ತನಿಖೆ ನಡೆಸಿ ಗುರುತಿಸಿ ಅಂಕಿ-ಅಂಶಗಳ ವಿವರವನ್ನು ನೀಡಿರುತ್ತಾರೆಂದು ಸಭೆಗೆ ತಿಳಿಸಲಾಯಿತು.

- ರಾಜ್ಯದಲ್ಲಿ 2013, 2016, 2018 & 2020 ರಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಒಟ್ಟು 7483 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪೈಕಿ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ 2927 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ರೂ.40,000/- ರಂತೆ ಒಂದು ಬಾರಿ ನಗದು ಸಹಾಯ (OTCA) ಮಂಜೂರಾಗಿರುತ್ತದೆ. ಉಳಿದಂತೆ 4556 ಅರ್ಜಿಗಳು ಕೇಂದ್ರ ಸರ್ಕಾರದಿಂದ ಅನುಮೋದನೆಗೆ ಬಾಕಿಯಿರುವುದಾಗಿ ಸಭೆಗೆ ತಿಳಿಸಲಾಯಿತು.

- 4556 ಅರ್ಜಿಗಳ ಕುರಿತು ಚರ್ಚಿಸಲಾಗಿ, 2020 ರ ನಂತರ ಗುರುತಿಸಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಸ್ವಚ್ಛತಾ ಅಭಿಯಾನ ಆಪ್‌ನಲ್ಲಿ ಅಪ್‌ಲೋಡ್ ಮಾಡಲು ಕಡ್ಡಾಯವಾಗಿ ಅನೈರ್ಮಲ್ಯ ಶೌಚಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾವಚಿತ್ರ (Live Picture) ಸಹ ಅಪ್‌ಲೋಡ್ ಮಾಡಬೇಕಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ಅನೈರ್ಮಲ್ಯ ಶೌಚಾಲಯಗಳು ಅಸ್ತಿತ್ವದಲ್ಲಿ ಇರುವುದಿಲ್ಲವೆಂದು ಎಲ್ಲಾ ಜಿಲ್ಲಾಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ದೃಢೀಕರಣ ಸಲ್ಲಿಸಿರುತ್ತಾರೆ.

ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಗುರುತಿನ ಸಂಖ್ಯೆಯನ್ನು ನೀಡಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನೀಡಲು ತೀರ್ಮಾನಿಸಿದೆ.

- ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿ ರಾಜ್ಯ ಸರ್ಕಾರದಿಂದ 4650+76 ಒಟ್ಟು 4726 ಜನರಿಗೆ ನೀಡಿರುವ ಗುರುತಿನ ಸಂಖ್ಯೆಯನ್ನು ಸರ್ಕಾರದ ಆದೇಶ ಸಂಖ್ಯೆ:SWD/SDC/222/2023 ದಿನಾಂಕ:19.04.2023 ರಂತೆ ನಿಗಧಿತ ನಮೂನೆಯಲ್ಲಿ ಗುರುತಿನ ಚೀಟಿಯನ್ನು ಒಂದು ತಿಂಗಳೊಳಗಾಗಿ ನಗರ ಸ್ಥಳೀಯ ಸಂಸ್ಥೆಗಳಿಂದ ವಿತರಿಸಿ ಅದರ ಪ್ರತಿಯನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ನಿಗಮಕ್ಕೆ ಸಲ್ಲಿಸುವುದು ತಪ್ಪಿದಲ್ಲಿ ನಿಯಂತ್ರಣಾಧಿಕಾರಿಗಳ ಮೂಲಕ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸುಗೊಳಿಸಲಾಗುವುದು.

- ಕರ್ನಾಟಕ ರಾಜ್ಯದಿಂದ ಗುರುತಿನ ಸಂಖ್ಯೆಯನ್ನು ನೀಡಿರುವ 4726 ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಪರ್ಯಾಯ ಉದ್ಯೋಗವನ್ನು ಪ್ರಾರಂಭಿಸಲು ಒಂದು ಬಾರಿ ನಗದು ಸಹಾಯ (OTCA) ದ ಜೊತೆಗೆ ವಿವಿಧ ಸಾಲಸೌಲಭ್ಯ ಯೋಜನೆಗಳನ್ನು Convergence ಮಾಡಿ One Time Grant ರೂ. 1.00 ಲಕ್ಷ ನೀಡುವುದು.

**(ಕ್ರಮ: ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ಮತ್ತು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು.)**

**ವಿಷಯ: 3 ಗುರುತಿಸಲ್ಪಟ್ಟ 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್ ಕಾಯ್ದೆ 2013ರ ಸೆಕ್ಷನ್ 13 & 16 ರನ್ವಯ ಪುನರ್ವಸತಿ ಕಲ್ಪಿಸುವ ಬಗ್ಗೆ.**

**ವಸತಿ:** ರಾಜೀವ್ ಗಾಂಧಿ ವಸತಿ ನಿಗಮದಿಂದ 3455 ಮನೆಗಳನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗಾಗಿ ಕಾಯ್ದಿರಿಸಿದ್ದು, ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುಮೋದಿಸಿ ಪಟ್ಟಿಯನ್ನು ನಿಗಮಕ್ಕೆ ಕಳುಹಿಸದೇ ಇರುವುದರಿಂದ 2020-21 ನೇ ಸಾಲಿನಿಂದ ಬಾಕಿ ಉಳಿದಿರುತ್ತವೆಂದು ಸಭೆಗೆ ಹಾಜರಾಗಿದ್ದಂತಹ ರಾಜೀವ್‌ಗಾಂಧಿ ವಸತಿ ನಿಗಮದ ಅಧಿಕಾರಿಗಳು ತಿಳಿಸಿದರು.

ಸದರಿ ವಿಚಾರವಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಪಟ್ಟಿಯನ್ನು ನೀಡುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅರೆ ಸರ್ಕಾರಿ ಪತ್ರವನ್ನು ಬರೆಯಲಾಗಿರುತ್ತದೆ ಹಾಗೂ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದಲೂ ಪಟ್ಟಿಯನ್ನು ಸಲ್ಲಿಸುವಂತೆ ಪತ್ರ ಬರೆದಿರುವುದಾಗಿ ಸಮಾಜ ಕಲ್ಯಾಣ ಇಲಾಖೆಯ ಸದಸ್ಯ ಕಾರ್ಯದರ್ಶಿ ತಿಳಿಸಿರುತ್ತಾರೆ. ಪಟ್ಟಿಯನ್ನು ನೀಡದಿರುವ ಜಿಲ್ಲಾಧಿಕಾರಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೋಟಿಸ್ ಜಾರಿಮಾಡುವಂತೆ ಸಭಾಧ್ಯಕ್ಷರು ಸೂಚಿಸಿದರು.

ಸ್ವಂತ ಮನೆಯನ್ನು ಹೊಂದಿರುವ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ

ಅವಲಂಭಿತರಿಗೆ ಮನೆಯನ್ನು ರಿಪೇರಿ ಮಾಡಲು ಅವಶ್ಯಕತೆ ಇದ್ದಲ್ಲಿ ನಿಗಮದಿಂದ ಆರ್ಥಿಕ ಸಹಾಯ ನೀಡಲು, ಸಲಹೆಗಾರರು, ಎಸ್‌ಸಿಎಸ್‌ಪಿ/ಟಿಎಸ್‌ಪಿ ನೋಡೆಲ್ ಏಜೆನ್ಸಿರವರು ಸಲಹೆ ನೀಡಿದರು.

ಶ್ರೀ ಕೆ.ಎನ್.ಬಸವಂತಪ್ಪ, ಶಾಸಕರು, ಈ ಬಗ್ಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಬಡಾವಣೆ ನಿರ್ಮಾಣ ಮಾಡಿ ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ಶೇ.10 ರಷ್ಟು ನಿವೇಶನಗಳನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದಿರಿಸಿ, ನಿವೇಶನ ಹಂಚಿಕೆ ಮಾಡುವಂತೆ ಆದೇಶ ಹೊರಡಿಸಲು ಸಭೆಯಲ್ಲಿ ಕೋರಿದರು.

ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿಯಲ್ಲಿ ರೂ7.5 ಲಕ್ಷಗಳನ್ನು ಮನೆ ನಿರ್ಮಾಣಕ್ಕಾಗಿ ನೀಡುತ್ತಿದ್ದು, ಸದರಿ ಯೋಜನೆಯನ್ನು ಆಯಾ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೂ ವಿಸ್ತರಿಸಿ ಸರ್ಕಾರಿ ಆದೇಶ ಹೊರಡಿಸುವುದು ಹಾಗೂ ಸದರಿ ಯೋಜನೆಯಡಿ ಮನೆ ಇಲ್ಲದೆ ನಿವೇಶನ ಇರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮನೆ ನಿರ್ಮಾಣ ಮಾಡಿ ಹಸ್ತಾಂತರಿಸುವುದು.

ಬಿ.ಬಿ.ಎಂ.ಪಿ ಅಧಿಕಾರಿಗಳು ಮಾತನಾಡುತ್ತಾ, ತಮ್ಮ ಪಾಲಿಕೆ ವತಿಯಿಂದ ವಿಶೇಷವಾಗಿ ಪೌರಕಾರ್ಮಿಕರಿಗೆ **"ಒಂಟಿ ಮನೆ"** ಯೋಜನೆ ಮೂಲಕ ವಸತಿ ಕಲ್ಪಿಸುತ್ತಿದ್ದು, ಅದರಂತೆಯೇ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ವಸತಿ ಕಲ್ಪಿಸಲು ಅವಕಾಶ ಮಾಡಿಕೊಡಬಹುದಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ತೀರ್ಮಾನ:**

- ಫಲಾನುಭವಿಗಳ ಪಟ್ಟಿಯನ್ನು ನೀಡದಿರುವ ಜಿಲ್ಲಾಧಿಕಾರಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೋಟಿಸ್ ಜಾರಿಮಾಡುವುದು ಮತ್ತು ಕೂಡಲೇ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಂದ ಪಡೆದು ರಾಜೀವ್‌ಗಾಂಧಿ ಅಭಿವೃದ್ಧಿ ನಿಗಮಕ್ಕೆ ಕಳುಹಿಸುವುದು. ವಿಳಂಬ ಮಾಡುವಂತಹ ಜಿಲ್ಲಾಧಿಕಾರಿಗಳ ಮೇಲೆ ನಿಯಂತ್ರಣಾಧಿಕಾರಿಗಳಿಂದ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸುಗೊಳಿಸಲಾಗುವುದು.
- ಖಾಯಂ ಪೌರಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯಡಿಯಲ್ಲಿ ನೀಡುತ್ತಿರುವ ಮಾದರಿಯಲ್ಲಿಯೇ ರೂ. 7.5 ಲಕ್ಷಗಳನ್ನು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅವಲಂಭಿತರಿಗೆ ನೀಡಲು ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆರವರು ಆದೇಶ ಹೊರಡಿಸಲು ಕ್ರಮವಹಿಸುವುದು.
- ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆರವರು ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅವಲಂಭಿತರಿಗೆ ವಿಶೇಷ ವರ್ಗವೆಂದು ಪರಿಗಣಿಸಿ ಮನೆಗಳನ್ನು ನೀಡಿರುವ ಬಗ್ಗೆ ಮುಂದಿನ ಸಭೆಗೆ ವರದಿ ಸಲ್ಲಿಸುವುದು.
- ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಕ್ರಿಯಾಯೋಜನೆಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್

ಸ್ಕ್ಯಾವೆಂಜರ್‌ಗಳ ಅವಲಂಭಿತರಿಗೆ ಮನೆಗಳನ್ನು ದುರಸ್ತಿ ಮಾಡಲು ಆರ್ಥಿಕ ಸಹಾಯ ನೀಡುವ ಸಂಬಂಧ ಅನುದಾನವನ್ನು ಒದಗಿಸಿಕೊಳ್ಳುವುದು.

**(ಕ್ರಮ: ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು)**

**ಶಿಕ್ಷಣ:**

ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳಿಗೆ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಪ್ರವೇಶ ಪರೀಕ್ಷೆ ಇಲ್ಲದೇ ಪ್ರವೇಶಾತಿ ಕಲ್ಪಿಸಲಾಗುತ್ತಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ/139/ಎಸ್‌ಡಿಸಿ/2021, ದಿನಾಂಕ:24.03.2021 ರಲ್ಲಿ ಆದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳ 24.10% ರಡಿ ಕಾಯ್ದಿರಿಸುವ ಅನುದಾನದಲ್ಲಿ ವಿದ್ಯಾರ್ಥಿ ವೇತನವನ್ನು ನೀಡುವ ಮೂಲಕ ಶೈಕ್ಷಣಿಕ ಉತ್ತೇಜನ ನೀಡಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸುವುದು.

ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳಿಗೆ ಶೈಕ್ಷಣಿಕವಾಗಿ ಉತ್ತೇಜನ ನೀಡಲು ಅವರ ಮಕ್ಕಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ನೀಡುವ ಯೋಜನೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಆದೇಶ ಪಡೆಯಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ಕ್ರಮವಹಿಸುವುದು.

ಸಫಾಯಿ ಕರ್ಮಚಾರಿಗಳು ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಹಾಗೂ ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅವಲಂಭಿತರ ಪ್ರತಿಭಾವಂತ ಮಕ್ಕಳನ್ನು ಶೈಕ್ಷಣಿಕವಾಗಿ ಉತ್ತೇಜನ ನೀಡುವ ಸಲುವಾಗಿ ಡಾ||ಬಿ.ಆರ್.ಅಂಬೇಡ್ಕರ್ ರವರು ಶಾಲೆಗೆ ಸೇರಿದ ದಿನವಾದ ದಿನಾಂಕ 7ನೇ ನವೆಂಬರ್ ಅಂದು **"ಪ್ರತಿಭಾ ಪುರಸ್ಕಾರ ದಿನ"**ವೆಂದು ಆಚರಿಸಲು ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದು, ಸದರಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವುದು.

**(ಕ್ರಮ: ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ)**

**ಕೌಶಲ್ಯ ತರಬೇತಿ:**

ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ತಮ್ಮ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಥವಾ ಅವರ ಕುಟುಂಬದ ಅವಲಂಭಿತರಲ್ಲಿ ಒಬ್ಬರಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅವಲಂಭಿತರಿಗೆ ಅವರ ಇಚ್ಛೆಗೆ ಒಳಪಡುವ

ಕೌಶಲ್ಯಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಿಲ್ಲಾ ತರಬೇತಿ ಕೇಂದ್ರಗಳ ಮೂಲಕ ಪರ್ಯಾಯ ಉದ್ಯೋಗ ನೀಡಲು ಅವಶ್ಯವಿರುವ ತರಬೇತಿಯನ್ನು ನೀಡಲು ಕ್ರಮವಹಿಸುವಂತೆ ನಿರ್ದೇಶಿಸಲಾಯಿತು ಹಾಗೂ ತರಬೇತಿ ನೀಡಿದ ಪಟ್ಟಿಯನ್ನು ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವುದು.

**(ಕ್ರಮ: ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಬೆಂಗಳೂರು)**

**ಸಾಲ ಸೌಲಭ್ಯ:**

- ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಮಾತನಾಡುತ್ತಾ, ಈಗಾಗಲೇ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅವಲಂಭಿತರಿಗೆ Mapping ಮಾಡಿ ಮಾನದಂಡದ ಪ್ರಕಾರ ಸಾಲಸೌಲಭ್ಯ ನೀಡುವುದು ಹಾಗೂ ವ್ಯಾಪಾರ ಮಾಡಲು ಇಚ್ಛಿಸಿದಲ್ಲಿ ಆರ್ಥಿಕ ಸೌಲಭ್ಯದ ವ್ಯವಸ್ಥೆ ಕಲ್ಪಿಸಬೇಕೆಂದು ಸೂಚಿಸಿದರು.

- ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬದ ಅವಲಂಭಿತರಿಗೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರು ಅನುವು ಮಾಡಿಕೊಡುವುದು ಮತ್ತು ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ತರಬೇತಿಯನ್ನು ಸಹ ನೀಡುವುದು.

- ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದವರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಟುಂಬದ ಒಬ್ಬರಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬದ ಅವಲಂಬಿತರಲ್ಲಿ ಒಬ್ಬರಿಗೆ ಸಾಲವನ್ನು ನೀಡುವಂತಹ ಸಂದರ್ಭದಲ್ಲಿ ಕಡ್ಡಾಯವಾಗಿ ಕೌಶಲ್ಯ ತರಬೇತಿಯನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪರ್ಯಾಯ ಉದ್ಯೋಗವನ್ನು ಪ್ರಾರಂಭಿಸಲು ಆರ್ಥಿಕ ಸಹಾಯ ನೀಡುವುದು ಹಾಗೂ ಈ ಬಗ್ಗೆ ಅವರಿಗೆ ನಿರಂತರವಾಗಿ ಜಿಲ್ಲಾ ಮಟ್ಟದಲ್ಲಿ ಘಟಕಗಳನ್ನು ಪ್ರಾರಂಭಿಸಿರುವ ಬಗ್ಗೆ ಜಿಲ್ಲಾ ಅಧಿಕಾರಿಗಳು ಮೇಲ್ವಿಚಾರಣೆ ಮಾಡುವಂತೆ ಕ್ರಮವಹಿಸುವುದು.

- **ಕಾನೂನು ಸೌಲಭ್ಯ:**

ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾಯ್ದೆ ಮತ್ತು ನಿಯಮ-2013 ಜಾರಿಯಲ್ಲಿದ್ದರೂ ಸಹ ಕಾಯ್ದೆಯ ಉಲ್ಲಂಘನೆಯ ಪ್ರಕರಣಗಳು ಹಾಗೂ ಮೃತಪಡುತ್ತಿರುವ ಪ್ರಕರಣಗಳು ಕಳೆದ 5 ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದು ಪೊಲೀಸ್ ಇಲಾಖೆಯ ವೈಫಲ್ಯವಾಗಿರುತ್ತದೆ.

ಆದ್ದರಿಂದ ಪೊಲೀಸ್ ಇಲಾಖೆಯವರು ಇಂತಹ ಪ್ರಕರಣಗಳ ಬಗ್ಗೆ ಸಾರ್ವಜನಿಕರು ದೂರು ನೀಡಲು ಬಂದಾಗ ಸಹಕಾರ ನೀಡಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಉಪ-ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಬಹಳಷ್ಟು ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಗೆ ಈ ಕಾಯ್ದೆಯ ಬಗ್ಗೆ ಅರಿವಿಲ್ಲದೇ ಪ್ರಕರಣಗಳನ್ನು ನೇರವಾಗಿ ಜಿಲ್ಲಾ ಸತ್ರ ನ್ಯಾಯಾಲಯಗಳಲ್ಲಿ ಸಲ್ಲಿಸುತ್ತಿದ್ದು ಬಹಳಷ್ಟು ಪ್ರಕರಣಗಳು ಖುಲಾಸೆಯಾಗುತ್ತಿರುತ್ತವೆ. ಆದುದ್ದರಿಂದ ಪೊಲೀಸ್ ಇಲಾಖೆಯಲ್ಲಿ ದಾಖಲಾದ ಪ್ರಕರಣಗಳನ್ನು ನೇರವಾಗಿ ಉಪ-ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಸಲ್ಲಿಸಿ ಕಾಯ್ದೆ ಪ್ರಕಾರ ಕ್ರಮವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಒಳಾಡಳಿತ ಇಲಾಖೆಗೆ ಅನಧಿಕೃತ ಟಿಪ್ಪಣಿಯನ್ನು ಕಳುಹಿಸಲಾಗಿರುತ್ತದೆ. ಅದರಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

- Assistant Inspecter General of Police (AIG) Crime, ಪೊಲೀಸ್ ಇಲಾಖೆ ರವರು ಈ ಬಗ್ಗೆ ಮಾತನಾಡಿ, ಎಂ.ಎಸ್.ಕಾಯ್ದೆ 2013 ರ ಪ್ರತಿ ಹಾಗೂ ಸರ್ಕಾರದ ಸುತ್ತೋಲೆ ದಿನಾಂಕ:31-08-2023 ರ ಪ್ರತಿಯನ್ನು ಎಲ್ಲಾ ಜಿಲ್ಲೆಗಳ ಪೊಲೀಸ್ ಠಾಣೆಗಳಿಗೆ ಕಳುಹಿಸಿಕೊಟ್ಟು, ಸದರಿ ಕಾಯ್ದೆಯಲ್ಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜಿಗ್ ಕೆಲಸ ನಿರ್ವಹಿಸುತ್ತಿರುವವರ ಬಗ್ಗೆ ದೂರು ಸ್ವೀಕೃತವಾದಲ್ಲಿ ಪ್ರಥಮ ವರ್ತಮಾನ ವರದಿ ದಾಖಲು ಮಾಡಲು ಅಗತ್ಯ ಕ್ರಮವಹಿಸುವಂತೆ ಇಲಾಖೆಯಿಂದ ಸಹ ಪ್ರತ್ಯೇಕವಾಗಿ ಸುತ್ತೋಲೆಯನ್ನು ಹೊರಡಿಸಿ ಸೂಚನೆ ನೀಡಲಾಗಿರುತ್ತದೆ ಎಂದು ತಿಳಿಸಿದರು.

- ಅಲ್ಲದೇ ಎಲ್ಲಾ ಪೊಲೀಸ್ ಠಾಣೆಗಳಲ್ಲಿನ SHO's ಗಳನ್ನು ಇಲಾಖೆಯಿಂದ ನೋಡಲ್ ಅಧಿಕಾರಿಗಳಾಗಿ ನೇಮಿಸಿ ಇತರೆ ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯಿಸಿ ಕಾಯ್ದೆಯನ್ವಯ ಕ್ರಮವಹಿಸುವಂತೆ ಸೂಚಿಸಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡಿ, ಒಂದು ವೇಳೆ ಜಿಲ್ಲೆಗಳಲ್ಲಿ ನೇಮಕಗೊಂಡಿರುವ ಇನ್ಸ್‌ಪೆಕ್ಟರ್/ ಪರಿಶೀಲನಾಧಿಕಾರಿಗಳು ಕಾರ್ಯನಿರ್ವಹಿಸದೆ ಇದ್ದ ಪಕ್ಷದಲ್ಲಿ ನೋಡಲ್ ಅಧಿಕಾರಿಗಳಾದ ಸಮಾಜ ಕಲ್ಯಾಣ ಇಲಾಖೆಯ ಜಂಟಿ/ಉಪ ಅಥವಾ ಸಹಾಯಕ ನಿರ್ದೇಶಕರು ರವರು ಕಾಯ್ದೆಯ ನಿಯಮಾನುಸಾರ ಇನ್ಸ್‌ಪೆಕ್ಟರ್/ ಪರಿಶೀಲನಾಧಿಕಾರಿಗಳ ಮೇಲೆ ಎಫ್.ಐ.ಆರ್ ದಾಖಲಿಸುವಂತೆ ಈಗಾಗಲೇ ಸುತ್ತೋಲೆ ಸಂಖ್ಯೆ: SWD/SDC/243/2023, ದಿನಾಂಕ:31-08-2023 ರಲ್ಲಿ ಸೂಚಿಸಿದ್ದು, ಅದರಂತೆಯೇ ಕ್ರಮವಹಿಸಲಾಗುವುದೆಂದು ಪೊಲೀಸ್ ಇಲಾಖೆಗೆ ತಿಳಿಸಿದರು.

ಜಿಲ್ಲಾ ಜಾಗೃತಿ ಸಮಿತಿಯಲ್ಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸದಸ್ಯರಾಗಿದ್ದು ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಸಭೆಗೆ ಹಾಜರಾಗಿ ಪ್ರಕರಣಗಳ ಬಗ್ಗೆ ಪರಿಶೀಲನೆ, ಪರಿಹಾರ ಇತ್ಯಾದಿಗಳನ್ನು ಕೈಗೊಂಡು ಪರಿಶೀಲನಾ ವರದಿಯನ್ನು ನಡವಳಿಯ ಮೂಲಕ ರಾಜ್ಯ ಮಟ್ಟದ ಕಛೇರಿಗೆ ಕಳುಹಿಸಿಕೊಡುವಂತೆ ಹಾಗೂ ಜಿಲ್ಲೆಗಳ ಕ್ರೂಢೀಕೃತ ವರದಿಯನ್ನು ರಾಜ್ಯ ಮೇಲ್ವಿಚಾರಣೆ ಸಮಿತಿ ಸಭೆಗೆ ಹಾಗೂ ಆಯೋಗಕ್ಕೆ ಸಲ್ಲಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ಸೂಚಿಸಿದರು.

**ತೀರ್ಮಾನ:**

- ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅವಲಂಭಿತರಿಗೆ Mapping ಮಾಡಿ ಮಾನದಂಡದ ಪ್ರಕಾರ ಸ್ವಉದ್ಯೋಗ ಮಾಡಲು ಸಾಲಸೌಲಭ್ಯ ನೀಡುವುದು ಮತ್ತು ವ್ಯಾಪಾರ ಮಾಡಲು ಇಚ್ಚಿಸಿದಲ್ಲಿ ಆರ್ಥಿಕ ವ್ಯವಸ್ಥೆ ಕಲ್ಪಿಸುವುದು.
- ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬದ ಅವಲಂಭಿತರಿಗೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರು ಅನುವು ಮಾಡಿಕೊಡುವುದು.
- ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದವರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಟುಂಬದ ಒಬ್ಬರಿಗೆ ಮತ್ತು ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬದ ಅವಲಂಭಿತರಲ್ಲಿ ಒಬ್ಬರಿಗೆ ಸಾಲವನ್ನು ನೀಡುವಂತಹ ಸಂಧರ್ಭದಲ್ಲಿ ಕಡ್ಡಾಯವಾಗಿ ಕೌಶಲ್ಯ ತರಬೇತಿಯನ್ನು ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪರ್ಯಾಯ ಉದ್ಯೋಗವನ್ನು ಪ್ರಾರಂಭಿಸಲು ಆರ್ಥಿಕ ಸಹಾಯ ನೀಡುವುದು.
- ಜಿಲ್ಲಾ ಜಾಗೃತಿ ಸಮಿತಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸದಸ್ಯರಾಗಿದ್ದು, ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಸಭೆಗೆ ಹಾಜರಾಗಿ ಎಂ.ಎಸ್ ಕಾಯ್ದೆ ಉಲ್ಲಂಘನೆಯಾದ ಪ್ರಕರಣಗಳ ಬಗ್ಗೆ ಪರಿಶೀಲನೆ, ಪರಿಹಾರ ಇತ್ಯಾದಿಗಳನ್ನು ಕೈಗೊಂಡು ಪರಿಶೀಲನಾ ವರದಿಯನ್ನು ನಡವಳಿಯ ಮೂಲಕ ರಾಜ್ಯ ಮಟ್ಟದ ಕಛೇರಿಗೆ ಕಳುಹಿಸಿಕೊಡುವಂತೆ ಹಾಗೂ ಜಿಲ್ಲೆಗಳ ಕ್ರೂಢೀಕೃತ ವರದಿಯನ್ನು ರಾಜ್ಯ ಮೇಲ್ವಿಚಾರಣೆ ಸಮಿತಿ ಸಭೆಗೆ ಹಾಗೂ ಆಯೋಗಕ್ಕೆ ಪೊಲೀಸ್ ಇಲಾಖೆರವರು ಸಲ್ಲಿಸುವಂತೆ ತೀರ್ಮಾನಿಸಲಾಯಿತು.
- ಸಮಾಜ ಕಲ್ಯಾಣ ಇಲಾಖೆಯಿಂದ ಕಳುಹಿಸಿರುವ ಅನಧಿಕೃತ ಟಿಪ್ಪಣಿಯಲ್ಲಿರುವ ಅಂಶಗಳ ಮೇಲೆ ಕೂಡಲೇ ಆದೇಶವನ್ನು ಹೊರಡಿಸಿ ಎಲ್ಲಾ ಪೊಲೀಸ್ ಅಧಿಕಾರಿಗಳಿಗೂ ಈ ಬಗ್ಗೆ ತರಬೇತಿ ನೀಡುವುದು.

**(ಕ್ರಮ: ಪೊಲೀಸ್ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ)**

**ವಿಷಯ: 4 ರಾಜ್ಯದಲ್ಲಿ ಗುರುತಿಸಲ್ಪಟ್ಟ ಒಟ್ಟು 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮ್ಯಾನ್ ಹೋಲ್/ಸೆಪ್ಟಿಕ್ ಟ್ಯಾಂಕ್/ತೆರೆದ ಚರಂಡಿ/ ಗಟಾರಗಳಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುವಾಗ ಮೃತಪಟ್ಟ ಕುಟುಂಬದ ಅವಲಂಭಿತರಿಗೆ ಉಚಿತ ಆರೋಗ್ಯ ಸೇವೆಯನ್ನು ಪಡೆಯಲು ವಿಶೇಷ ಆರೋಗ್ಯ ಕಾರ್ಡ್ ನ್ನು ವಿತರಿಸುವುದು.**

**ಚರ್ಚೆ:** ಶ್ರೀ ಕೆ.ಎಸ್ ಬಸವಂತಪ್ಪ, ಮಾನ್ಯ ಶಾಸಕರು ರಾಜ್ಯದಲ್ಲಿ ಗುರುತಿಸಲ್ಪಟ್ಟ ಒಟ್ಟು 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ ತೆರೆದ ಚರಂಡಿ/ಗಟಾರಗಳಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುವಾಗ ಮೃತಪಟ್ಟ 76 ಕುಟುಂಬದ ಅವಲಂಭಿತರು ಮಾರಾಣಾಂತಿಕ ಕಾಯಿಲೆಗಳಿಗೆ ಒಳಗಾದ ಸಂಧರ್ಭದಲ್ಲಿ ಇವರಿಗೆ ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆಯನ್ನು

ಪಡೆಯಲು ವಿಶೇಷವಾದ ಆರೋಗ್ಯ ಕಾರ್ಡ್‌ಅನ್ನು ವಿತರಿಸುವಂತೆ ಸಭಾಧ್ಯಕ್ಷರನ್ನು ಕೋರಿದರು.

**ತೀರ್ಮಾನ:**

- ಗುರುತಿಸಲ್ಪಟ್ಟ ಒಟ್ಟು 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ ತೆರೆದ ಚರಂಡಿ/ಗಟಾರಗಳಲ್ಲಿ ಸ್ವಚ್ಛಗೊಳಿಸುವಾಗ ಮೃತಪಟ್ಟ 76 ಕುಟುಂಬದ ಅವಲಂಭಿತರು ಮಾರಾಣಾಂತಿಕ ಕಾಯಿಲೆಗಳಿಂದ ನರಳುತಿದ್ದಲ್ಲಿ, ರಾಜ್ಯದ ಸರ್ಕಾರಿ, ಖಾಸಗಿ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಪಡೆಯುವಂತೆ ಆರೋಗ್ಯ ಇಲಾಖೆಯವರು ಒಂದು ತಿಂಗಳೊಳಗಾಗಿ ವಿಶೇಷ ಆರೋಗ್ಯ ಕಾರ್ಡ್ ವಿತರಿಸುವುದು.

**(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ)**

**ವಿಷಯ: 5 ಒಟ್ಟಾರೆ ಗುರುತಿಸಲ್ಪಟ್ಟ 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕೆಲಸ ನಿರ್ವಹಿಸುವಾಗ ಮೃತಪಟ್ಟ 76 (ಕರ್ನಾಟಕ ರಾಜ್ಯ ನಿವಾಸಿ) ಕಾರ್ಮಿಕರ ಕುಟುಂಬದ ಅವಲಂಭಿತರು ಸೇರಿ ಒಟ್ಟು 7569 ಜನರಿಗೆ ಒಂದೇ ಬಾರಿ ಸಂಪೂರ್ಣ ಪುನರ್ವಸತಿ ಕಲ್ಪಿಸಲು ಕಾರ್ಯಕ್ರಮವಾರು ಅನುದಾನ ನಿಗದಿಪಡಿಸುವುದು.**

**ಚರ್ಚೆ:** ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ವ್ಯಾಪ್ತಿಗೆ ಒಳಪಟ್ಟಿದ್ದು, ನಿಗಮಕ್ಕೆ ನೀಡಿರುವ ಅನುದಾನವು ಬಹಳಷ್ಟು ಕಡಿಮೆ ಇದ್ದು, ಸಂಪೂರ್ಣವಾದ ಪುನರ್ವಸತಿ ಕಲ್ಪಿಸಲು ಸಾಧ್ಯವಾಗುವುದಿಲ್ಲವಾದ ಕಾರಣ ಸಂಬಂಧಪಟ್ಟ ಇಲಾಖೆರವರು ಸಹಾ ಅನುದಾನವನ್ನು ಪುನರ್ವಸತಿಗೆ ನಿಗಧಿಪಡಿಸಿಕೊಳ್ಳುವ ಬಗ್ಗೆ ಪ್ರಸ್ತಾಪಿಸಿದರು.

**ತೀರ್ಮಾನ: ಗ್ರಾಮೀಣಾಭಿವೃದ್ಧಿ ಸಚಿವರು ಸಿ.ಎಸ್.ಆರ್ (CSR Fund) ಫಂಡ್ ನಲ್ಲಿ ವಿಶೇಷ ಪ್ಯಾಕೇಜ್ ರೂಪಿಸುವ ಮೂಲಕ ಪುನರ್ವಸತಿ ಕಲ್ಪಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.**

**ವಿಷಯ: 6 ತಂತ್ರಾಂಶ ರೂಪಿಸುವುದು (ಸಾಫ್ಟ್ ವೇರ್)**

**ಚರ್ಚೆ:** ಎಂ.ಎಸ್ ಕಾಯ್ದೆ 2013 ಸೆಕ್ಷನ್ 13 ಮತ್ತು 16 ರನ್ವಯ ಪುನರ್ವಸತಿ ಕಲ್ಪಿಸಲು ರಾಜ್ಯದಲ್ಲಿ ಗುರುತಿಸಲ್ಪಟ್ಟ ಒಟ್ಟಾರೆ 7493 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮತ್ತು ಮ್ಯಾನ್ ಹೋಲ್/ಸೆಪ್ಟಿಕ್ ಟ್ಯಾಂಕ್/ತೆರೆದ ಚರಂಡಿ/ಪಿಟ್ ಗುಂಡಿಗಳಲ್ಲಿ ಸ್ವಚ್ಛತೆ ಮಾಡುತ್ತಿರುವಾಗ ಮೃತಪಟ್ಟ ಕಾರ್ಮಿಕರ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸಲು ಹಾಗೂ ಸಫಾಯಿ ಕರ್ಮಚಾರಿಗಳ ಸಂಪೂರ್ಣ ಮಾಹಿತಿಗಳನ್ನು ಸಾಫ್ಟ್ ವೇರ್ ನಲ್ಲಿ ಮೊಬೈಲ್ ಆಪ್ ನ ಮೂಲಕ ತಯಾರಿಸಲು, ನಿರ್ದೇಶಕರು, ವಿದ್ಯುನ್ಮಾನ ನಾಗರೀಕ ಸೇವ

ವಿತರಣಾ ನಿರ್ದೇಶನಾಲಯ, ಬೆಂಗಳೂರು ಇವರೊಂದಿಗೆ ಆಯೋಗವು ಸಭೆಗಳನ್ನು ಏರ್ಪಡಿಸಿ ಅಂತಿಮಗೊಳಿಸಲಾಗಿರುತ್ತದೆ.

ಮೊಬೈಲ್ ಆಪ್ ನ್ನು ತಯಾರಿಸಲು ನಿರ್ದೇಶಕರು, ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ, ಬೆಂಗಳೂರುರವರಿಗೆ ಮತ್ತು ತಳ ಸಮುದಾಯಗಳ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ ಬೆಂಗಳೂರುರವರು ನಡೆಸುವ ಸಮೀಕ್ಷೆಗೆ ತಗಲುವ ವೆಚ್ಚವನ್ನು ಭರಿಸಲು ಹಾಗೂ ಸದರಿ ಸಮೀಕ್ಷೆ ಮತ್ತು ಮೊಬೈಲ್ ಆಪ್ ನ್ನು ನಿರ್ವಹಣೆ ಮಾಡಲು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮಕ್ಕೆ ನೀಡಲು ಅನುಮತಿಗಾಗಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗರವರು ಸಭೆಯಲ್ಲಿ ಕೋರಲಾಯಿತು.

**ತೀರ್ಮಾನ: ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಿ ಮೊಬೈಲ್ ಆಪ್ (ತಂತ್ರಾಂಶ) ದಲ್ಲಿ ಅಳವಡಿಸುವುದು ಹಾಗೂ ನಿರ್ವಹಣೆ ಮಾಡುವುದು ಅತೀ ಅವಶ್ಯಕತೆಯಾಗಿರುವುದರಿಂದ, ಮೊಬೈಲ್ ಆಪ್ ನ್ನು ತಯಾರಿಸಲು ಮತ್ತು ಸಮೀಕ್ಷೆಯ ಸಂಪೂರ್ಣವಾದ ವೆಚ್ಚವನ್ನು ಭರಿಸಲು ಹಾಗೂ ನಿರ್ವಹಣೆ ಮಾಡಲು ಅನುಮೋದಿಸಿದೆ.**

**(ಕ್ರಮ: ವಿದ್ಯುನ್ಮಾನ ನಾಗರೀಕ ಸೇವ ವಿತರಣಾ ನಿರ್ದೇಶನಾಲಯ, ಬೆಂಗಳೂರು, ತಳ ಸಮುದಾಯಗಳ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ ಬೆಂಗಳೂರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಬೆಂಗಳೂರು.)**

**ವಿಷಯ:7 ಸಕ್ಕಿಂಗ್/ಜಟ್ಟಿಂಗ್ ಯಂತ್ರಗಳ ಖರೀದಿ, ರಿಪೇರಿ ಮತ್ತು ಕೆಟ್ಟುಹೋಗಿರುವ ಯಂತ್ರಗಳ ಬಗ್ಗೆ.**

**ಚರ್ಚೆ:** ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಸಚಿವರು ಬೆಂಗಳೂರಿನಲ್ಲಿ ಇರುವಂತಹ ಅಪಾರ್ಟ್‌ಮೆಂಟ್‌ಗಳ ಪಟ್ಟಿ ಹಾಗೂ ಸದರಿ ಅಪಾರ್ಟ್‌ಮೆಂಟ್‌ಗಳು ಸಕ್ಕಿಂಗ್ ಯಂತ್ರಗಳ ಖರೀದಿಗಾಗಿ ಮನವಿ ಕೊಟ್ಟಿರುವ ವಿವರವನ್ನು ಪಡೆಯುವುದು, ಇದರಿಂದಾಗಿ ಅಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುತ್ತಿರುವಂತಹ ವ್ಯಕ್ತಿಗಳನ್ನು ಗುರುತಿಸಬಹುದು ಎಂದು ತಿಳಿಸಿದರು. ಇತ್ತೀಚೆಗೆ ಅಪಾರ್ಟ್‌ಮೆಂಟ್‌ನಲ್ಲಿ ಎಸ್.ಟಿ.ಪಿ ಪ್ಲಾಂಟ್ ನಿರ್ವಹಣೆಯಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ಇದರಿಂದಾಗಿ ಅವರ ಕುಟುಂಬದ ಪರಿಸ್ಥಿತಿಯು ಚಿಂತಾಜನಕವಾಗಿರುತ್ತದೆ. ರಾಜ್ಯದ ಅಪಾರ್ಟ್‌ಮೆಂಟ್ ನಲ್ಲಿರುವ ಎಸ್.ಟಿ.ಪಿ ಪ್ಲಾಂಟ್ ಗಳ ನಿರ್ವಹಣೆಯನ್ನು ಯಾವ ರೀತಿ ಮಾಡಬೇಕಾಗಿರುತ್ತದೆ ಎಂದು ಸರ್ಕಾರವು ಯಾವ ಇಲಾಖೆಯಿಂದ ಗೈಡ್ ಲೈನ್ಸ್ ನೀಡುತ್ತಿದೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವಂತೆ ಬಿ.ಡಬ್ಲ್ಯೂ.ಎಸ್.ಎಸ್ ಬಿ ರವರಿಗೆ ನಿರ್ದೇಶಿಸಿದರು.

- ಪ್ರಧಾನ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬೆಂಗಳೂರು ನಗರ ವ್ಯಾಪ್ತಿಯ ಯು.ಜಿ.ಡಿಯನ್ನು ಮತ್ತು ಅಪಾರ್ಟ್‌ಮೆಂಟ್‌ಗಳಿಂದ ಯುಜಿಡಿ ಲೈನ್ ಗೆ ಸಂಪರ್ಕಿಸಿದಂತಹುಗಳನ್ನು ಯಂತ್ರಗಳ ಮೂಲಕ ಸ್ವಚ್ಛಗೊಳಿಸುತ್ತಿರುತ್ತೇವೆ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಂದಲೇ ಎಸ್.ಟಿ.ಪಿ ಪ್ಲಾಂಟ್ ಗಳನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುತ್ತೇವೆ. ಅಪಾರ್ಟ್‌ಮೆಂಟ್‌ಗೆ ಸಂಬಂಧಿಸಿದಂತೆ, ಮಾಲಿನ್ಯ ನಿಯಂತ್ರಣ ಮಂಡಳಿಯವರು ಪರವಾನಗಿಯನ್ನು ನೀಡುತ್ತಾರೆಂದು ತಿಳಿಸಿದರು.

- ಮಾನ್ಯ ಸಭಾಧ್ಯಕ್ಷರು ಸದರಿ ವಿಷಯವಾಗಿ ರಾಜ್ಯದಲ್ಲಿ ಮತ್ತು ಬೆಂಗಳೂರು ಮಹಾನಗರ ಪಾಲಿಕಾ ವ್ಯಾಪ್ತಿಯಲ್ಲಿ ಬಹಳಷ್ಟು ಎಸ್.ಟಿ.ಪಿ ಪ್ಲಾಂಟ್ ಗಳನ್ನು ನಿರ್ವಹಣೆ ಮಾಡುತ್ತಿರುತ್ತಾರೆ. ಆದರೆ ಇವುಗಳನ್ನು ಸ್ವಚ್ಛಗೊಳಿಸಲು ಸಕ್ಕಿಂಗ್, ಜೆಟ್ಟಿಂಗ್ ಹಾಗೂ ರಾಡೆರಿಂಗ್ ಮಿಷನ್ ಗಳು ಅತ್ಯವಶ್ಯಕವಾಗಿರುತ್ತದೆ ಮತ್ತು ನುರಿತ ಕಾರ್ಮಿಕರನ್ನು ಎಸ್.ಟಿ.ಪಿ ಪ್ಲಾಂಟ್ ಗಳನ್ನು ನಿರ್ವಹಣೆ ಮಾಡಲು ನೇಮಿಸಬೇಕಾಗಿರುತ್ತದೆ. ಬೆಂಗಳೂರಿನಲ್ಲಿ ಎಷ್ಟು ಎಸ್.ಟಿ.ಪಿ ಪ್ಲಾಂಟ್ ಗಳಿವೆ, ಇವುಗಳ ಅನುಪಾತಕ್ಕೆ ತಕ್ಕಂತೆ ಸಕ್ಕಿಂಗ್, ಜೆಟ್ಟಿಂಗ್ ಯಂತ್ರಗಳು ಎಷ್ಟು ಇವೆ, ಬೆಂಗಳೂರು ಮಹಾನಗರ ಪಾಲಿಕೆಯ ಅಪಾರ್ಟ್‌ಮೆಂಟ್‌ಗಳಲ್ಲಿ ನಿರ್ಮಾಣವಾಗಿರುವ ಎಸ್.ಟಿ.ಪಿ ಪ್ಲಾಂಟ್ ಗಳ ಮುಂದೆ ಅಪಾಯಕಾರಿ ಎಚ್ಚರಿಗೆ ಬೋರ್ಡ್ ಗಳು, ಸುರಕ್ಷತಾ ಪರಿಕರಗಳ ನಾಮ ಫಲಕ ಮತ್ತು ಎಂ.ಎಸ್ ಕಾಯ್ದೆ ಉಲ್ಲಂಘನೆಯಾದರೆ ಒಳಪಡುವ ದಂಢ ಮತ್ತು ಶಿಕ್ಷೆಯ ಬಗ್ಗೆ ನಾಮಫಲಕಗಳನ್ನು ಅಳವಡಿಸಿರುವ ಬಗ್ಗೆ ಬಿ.ಬಿ.ಎಂ.ಪಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿ ವರದಿ ಸಲ್ಲಿಸಲು ಸೂಚಿಸಿದರು.

**ತೀರ್ಮಾನ:**

- ರಾಜ್ಯದಲ್ಲಿ ಒಟ್ಟು ಎಷ್ಟು ಅಪಾರ್ಟ್‌ಮೆಂಟ್‌ಗಳಲ್ಲಿ ಎಸ್.ಟಿ.ಪಿ ಪ್ಲಾಂಟ್ ಗಳನ್ನು ನಿರ್ಮಿಸಲಾಗಿದೆ.

  **(ಕ್ರಮ: ಪೌರಾಡಳಿತಿ ನಿರ್ದೇಶನಾಲಯ ಮತ್ತು ನಗರಾಭಿವೃದ್ಧಿ ಇಲಾಖೆ.)**

- ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗಳಲ್ಲಿ ಎಷ್ಟು ಎಸ್.ಟಿ.ಪಿ ಪ್ಲಾಂಟ್ ಗಳನ್ನು ನಿರ್ಮಿಸಲಾಗಿದೆ ಮತ್ತು ಅವುಗಳ ಮುಂದೆ ಅಪಾಯಕಾರಿ ಎಚ್ಚರಿಗೆ ಬೋರ್ಡ್ ಗಳು, ಸುರಕ್ಷತಾ ಪರಿಕರಗಳ ನಾಮ ಫಲಕ ಮತ್ತು ಉಲ್ಲಂಘನೆಯ ಶಿಕ್ಷೆಯ ಬಗ್ಗೆ ನಮೂದಿಸಿರುವ ಕುರಿತು ಬಿ.ಬಿ.ಎಂ.ಪಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಒಂದು ತಿಂಗಳೊಳಗಾಗಿ ಆಯೋಗಕ್ಕೆ ವರದಿ ಸಲ್ಲಿಸಲು ನಿರ್ದೇಶಿಸಿದೆ.

  **(ಕ್ರಮ: ಬಿ.ಬಿ.ಎಂ.ಪಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ)**

**ವಿಷಯ:8 ಬಿಬಿಎಂಪಿ ಮತ್ತು ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರಪಾವತಿ ಪೌರಕಾರ್ಮಿಕರನ್ನು ಮೊದಲನೇ ಹಂತದ 11,133 ಕಾರ್ಮಿಕರನ್ನು ಖಾಯಂಗೊಳಿಸಿದ್ದು, 2ನೇ ಹಂತದಲ್ಲಿ 12,872 ಕಾರ್ಮಿಕರನ್ನು ಖಾಯಂಗೊಳಿಸಲು ಆದೇಶವಾಗಿದ್ದು ಸದರಿ ಆದೇಶವನ್ನು ಜಾರಿಗೊಳಿಸುವ ಬಗ್ಗೆ.**

**ವಿಷಯ:9 ಬಿಬಿಎಂಪಿ ಮತ್ತು ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್, ಕ್ಲೀನರ್ಸ್, ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಟೋ ಮತ್ತು ಟಿಪ್ಪರ್ ಚಾಲಕರು ನೇರಪಾವತಿಡಿಯಲ್ಲಿ ಪರಿಗಣಿಸಲು ಆದೇಶಿಸುವ ಬಗ್ಗೆ.**

ಸದರಿ ಸಭೆಯು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನಿರ್ಮೂಲನೆಗೆ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಮೇಲಿನ ವಿಷಯಗಳು ಸಫಾಯಿ ಕರ್ಮಚಾರಿಗಳಿಗೆ ಸಂಬಂಧಪಟ್ಟಿರುತ್ತದೆ. ಆದ್ದರಿಂದ ಈ ವಿಷಯವನ್ನು ಚರ್ಚಿಸಲು ಪ್ರತ್ಯೇಕವಾಗಿ ಸಭೆ ನಡೆಸಲಾಗುವುದೆಂದು ಸಭಾಧ್ಯಕ್ಷರು ತಿಳಿಸಿದರು.

**ವಿಷಯ: 10 ಗ್ರಾಮ ಪಂಚಾಯಿತಿಗಳಲ್ಲಿ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿರುವ ಕುರಿತು.**

- ಡಾ. ಕೆ.ಬಿ.ಓಬಳೇಶ್, ನಾಮ ನಿರ್ದೇಶಿತ ಸದಸ್ಯರು ಮಾತನಾಡುತ್ತಾ, ಐ.ಪಿ.ಡಿ ಸಾಲಪ್ಪರವರ ಶಿಫಾರಸ್ಸಿನಂತೆ ಗ್ರಾಮ ಪಂಚಾಯಿತಿಗಳಲ್ಲಿ 1000 ಜನರಿಗೆ ಒಬ್ಬ ಸ್ವಚ್ಛತಾ ಕಾರ್ಮಿಕರನ್ನು ನೇಮಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ. ಆದರೆ ಗ್ರಾಮ ಪಂಚಾಯಿತಿಗಳಲ್ಲಿ ಮಂಜೂರಾತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದ್ದು, ಸದರಿ ಕಾರ್ಮಿಕರಿಗೆ ಮಾಹೆಯಾನ ಸರಿಯಾಗಿ ಕನಿಷ್ಟ ವೇತನವನ್ನು ಸಹ ನೀಡದೇ ಕೇವಲ ಕೆಲಸ ಮಾಡಿಸುತ್ತಿರುತ್ತಾರೆ. ಅಲ್ಲದೇ ಈ ಪೌರಕಾರ್ಮಿಕರಿಗೆ ಪಿ.ಎಫ್, ಇ.ಎಸ್.ಐ, ಪಿ.ಎಂ.ಜೆ.ಜೆ.ಬಿ.ವೈ, ಪಿ.ಎಂ.ಎಸ್.ಬಿ.ವೈ ಮತ್ತು ಎಸ್.ಬಿ.ಐ ಗ್ರೂಪ್ ಆಕ್ಸಿಡೆಂಟ್ ಇನ್ಶೂರೆನ್ಸ್‌ಗಳನ್ನು ಪಾವತಿಸುತ್ತಿಲ್ಲ ಎಂದು ಸಭೆಯ ಗಮನಕ್ಕೆ ತರಲಾಯಿತು.

- ಶ್ರೀ ಡಿ.ಆರ್. ರಾಜು, ನಾಮ ನಿರ್ದೇಶಿತ ಸದಸ್ಯರು ಮಾತನಾಡುತ್ತಾ, ಹಲವು ಗ್ರಾಮಪಂಚಾಯಿತಿಗಳಲ್ಲಿ ಸುಮಾರು 10 ರಿಂದ 15 ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತಿದ್ದು, ಸುಮಾರು 20-30 ತಿಂಗಳುಗಳ ಕಾಲ ವೇತನವಿಲ್ಲದೆ ಬಹಷ್ಟು ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕುಟುಂಬ ನಿರ್ವಹಣೆಯೂ ಸಹಾ ಕಷ್ಟಕರವಾಗಿತ್ತದೆ, ನಗರ ಪ್ರದೇಶದಲ್ಲಿ 700 ಜನಕ್ಕೆ ಒಬ್ಬರಂತೆ, ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿರುತ್ತಾರೆ. ಗ್ರಾಮಪಂಚಾಯಿತಿಗಳಲ್ಲಿ ಐ.ಪಿ.ಡಿ ಸಾಲಪ್ಪನವರ ವರದಿಯಂತೆ 1000 ಜನಕ್ಕೆ ಒಬ್ಬ ಪೌರಕಾರ್ಮಿಕರಂತೆ ನೇಮಿಸಿಕೊಂಡಲ್ಲಿ ಸಮಸ್ಯೆಯು ನಿವಾರಣೆಯಾಗುತ್ತದೆ. ರಾಜ್ಯದಲ್ಲಿ 6022 ಗ್ರಾಮಪಂಚಾಯಿತಿಗಳಿದ್ದು, ಕೇವಲ 5060 ಜನ ಕಾರ್ಮಿಕರು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತಾರೆ. ಹಲವು ಗ್ರಾಮಪಂಚಾಯಿತಿಗಳಲ್ಲಿ ಸುಮಾರು 12,000 ಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದರೂ ಒಬ್ಬರು ಕಾರ್ಮಿಕರೇ ಕಾರ್ಯನಿರ್ವಹಿಸುತ್ತಿರುತ್ತಾರೆ. ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಒಬ್ಬರೂ ಸಹಾ ಇರುವುದಿಲ್ಲ. ಇದರಿಂದಾಗಿ ಹಾಲಿ ಸುಮಾರು 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ವೇತವನ್ನು ಪಾವತಿಸದೆ ಬಹಳಷ್ಟು ತೊಂದರೆಯಾಗಿರುತ್ತದೆ ಎಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.

**ತೀರ್ಮಾನ:**

- ಹಾಲಿ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರನ್ನು ಖಾಲಿ ಇರುವ ಹುದ್ದೆಗಳಿಗೆ ಪರಿಗಣಿಸಿ ಕನಿಷ್ಟ ವೇತನ, ಪಿ.ಎಫ್, ಇ.ಎಸ್.ಐಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ನಿರ್ದೇಶಿಸಿದೆ.

**(ಕ್ರಮ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.)**

**ವಿಷಯ: 11 ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಹೆಚ್ಚುವರಿಯಾಗಿ ಹುದ್ದೆಗಳನ್ನು ಸೃಜಿಸುವ ಕುರಿತು.**

**ಚರ್ಚೆ:**

ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ರವರು ಮಾತನಾಡಿ, ಆಯೋಗಕ್ಕೆ ಒಟ್ಟು 18 ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 6 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಹೊರಸಂಪನ್ಮೂಲ ಮುಖೇನ 6 ಜನರನ್ನು ಡೇಟಾ ಎಂಟ್ರಿ ಆಪರೇಟರ್‌ಗಳಾಗಿ ತೆಗೆದುಕೊಂಡು ಕೆಲಸ ಮಾಡಿಸಲಾಗುತ್ತಿರುತ್ತದೆ. ಆದರೆ ಆಯೋಗದಲ್ಲಿ ವಿವಿಧ ಇಲಾಖೆಗಳ ಸರ್ಕಾರದ ಅಪರ/ಪ್ರಧಾನ ಕಾರ್ಯದರ್ಶಿ ಗಳೊಂದಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ/ಸಫಾಯಿ ಕರ್ಮಚಾರಿಗಳ ವಿಚಾರಗಳ ಕುರಿತು ಸಭೆಗಳನ್ನು ಆಯೋಜಿಸುವುದು ಹಾಗೂ ಸಾಮಾಜಿಕ ಮತ್ತು ಸಬಲೀಕರಣ ಮಂತ್ರಾಲಯ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಪ್ರತಿ ವಾರಕ್ಕೊಮ್ಮೆ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗಿರುತ್ತದೆ ಹಾಗೂ ಆಯೋಗದಲ್ಲಿ ಲೆಕ್ಕ-ಶಾಖೆ, ಆಡಳಿತ-ಶಾಖೆ, ನ್ಯಾಯಾಲಯ-ಶಾಖೆ, ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಬಗ್ಗೆ ಪರಿಶೀಲನೆ ನಡೆಸಲು ಸಫಾಯಿ ಕರ್ಮಚಾರಿಗಳ ಶಾಖೆ, ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನಿರ್ಮೂಲನೆಯ ಬಗ್ಗೆ ನಿರಂತರವಾಗಿ ಸಮನ್ವಯ ಶಾಖೆ, ಸಫಾಯಿ ಕರ್ಮಚಾರಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಂಶೋಧನಾ ಶಾಖೆ, ಸಾಂಖ್ಯಿಕ ಶಾಖೆಗಳು ಅವಶ್ಯಕತೆ ಇದ್ದು, ಎಲ್ಲಾ ಶಾಖೆಗಳಿಗೂ ಒಬ್ಬ ಅಧಿಕಾರಿ ಮತ್ತು ಅವರಿಗೆ ಸಿಬ್ಬಂದಿಗಳ ಅವಶ್ಯಕತೆ ಅತ್ಯಾವಶ್ಯಕವಾಗಿರುವುದರಿಂದ ಕನಿಷ್ಟ 10 ಹುದ್ದೆಗಳನ್ನು ಮಂಜೂರು ಮಾಡಲು ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗರವರು ಸಭೆಗೆ ವಿವರಿಸಿದರು. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಹೆಚ್ಚುವರಿಯಾಗಿ ಸೃಜಿಸುವ ಹುದ್ದೆಗಳ ವಿವರ:-

| **ಹೊಸದಾಗಿ ಸೃಜಿಸಬೇಕಾಗಿರುವ ಹುದ್ದೆಗಳ ವಿವರ** | | | |
|---|---|---|---|
| **ಕ್ರ ಸಂ** | **ಹುದ್ದೆ ವಿವರ** | **ಹುದ್ದೆಗಳ ಸಂಖ್ಯೆ** | **ವೇತನ ಶ್ರೇಣಿ** |
| 1. | ಸಹಾಯಕ ನಿರ್ದೇಶಕರು ಗ್ರೇಡ್-1 | 01 | 52,650-97,100 |
| 2. | ಸಹಾಯಕ ನಿರ್ದೇಶಕರು ಗ್ರೇಡ್-2/ ಕಾನೂನು ಅಧಿಕಾರಿ | 01 | 43,100-83,900 |
| 3. | ಸಾಂಖ್ಯಿಕ ಅಧಿಕಾರಿ (ಸಾಂಖ್ಯಿಕ ಇಲಾಖೆಯಿಂದ ನಿಯೋಜನೆ) | 01 | 37,900-70,850 |
| 4. | ತನಿಖಾ ಸಹಾಯಕರು, ಕಛೇರಿ ಅಧೀಕ್ಷಕರ ತತ್ಸಮಾನ ವೃಂದ | 01 | 37,900-70,850 |
| 5. | ಕಛೇರಿ ಅಧೀಕ್ಷಕರು | 01 | 37,900-70,850 |
| 6. | ಪ್ರಥಮ ದರ್ಜೆ ಸಹಾಯಕರು | 01 | 27,650-52,650 |
| 7. | ಶೀಘ್ರ ಲಿಪಿಗಾರರು | 01 | 27,650-52,650 |
| 8. | 'ದ್ವಿತೀಯ ದರ್ಜೆ ಸಹಾಯಕರು | 02 | 21,400-42,000 |
| 9. | ಡಿ' ಗ್ರೂಪ್ ನೌಕರರು | 01 | 17,000-28,950 |
| | **ಒಟ್ಟು** | **10** | |

- ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ ರವರು ಈ ಬಗ್ಗೆ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ವಿವಿಧ ಇಲಾಖೆಗಳಿಗೆ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ಅಡ್ವೋಕೇಟ್ ಜನರಲ್ ಹುದ್ದೆ ನೀಡುವಂತೆ ಕೋರಲಾಗಿರುತ್ತದೆ. ಅದರಲ್ಲಿ ಒಬ್ಬರನ್ನು ಪ್ರಮುಖವಾಗಿ ಸಮಾಜ ಕಲ್ಯಾಣ ಇಲಾಖೆಗೆ ನೇಮಿಸುವಂತೆ ಕೇಳಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು ಸಹಮತ ವ್ಯಕ್ತಪಡಿಸಿರುತ್ತಾರೆ. ಸದ್ಯದಲ್ಲೇ ಹೆಚ್ಚುವರಿ ಅಡ್ವೋಕೇಟ್ ಜನರಲ್‌ಗಳ ನೇಮಕವಾಗುತ್ತಿದ್ದು, ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಕಾನೂನು ಅಭಿಪ್ರಾಯ ಹಾಗೂ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಂಬಂಧ ಹೆಚ್ಚಿನ ಪ್ರಾಮುಖ್ಯತೆ ನೀಡಲು ತಿಳಿಸಲಾಗಿರತ್ತದೆ ಹಾಗೂ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಕನಿಷ್ಟ 10 ಹುದ್ದೆಗಳನ್ನು ಮಂಜೂರಾತಿ ಮಾಡುವಂತೆ ಆರ್ಥಿಕ ಇಲಾಖೆಗೆ ಸೂಚಿಸಿದರು.
- ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಅಧಿಕಾರಿಗಳು ಮಾತನಾಡುತ್ತಾ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಇಲ್ಲಿ ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸುವ ಸಂಬಂಧ ಕಾನೂನು ಅಧಿಕಾರಿಗಳ ಅವಶ್ಯಕತೆ ಇರುವುದಾಗಿ ತಿಳಿಸಿದ್ದು, ಸದರಿ ಆಯೋಗಕ್ಕೆ Prosecution Post (ಹುದ್ದೆ) ಮಂಜೂರು ಮಾಡಿ, ಅಧಿಕಾರಿಯನ್ನು ನೇಮಕ ಮಾಡಬಹುದಾಗಿರುತ್ತದೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

**ತೀರ್ಮಾನ:**

➢ ಸಫಾಯಿ ಕರ್ಮಚಾರಿಗಳ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳಿಗೆ ಮತ್ತು ಅವರ ಕುಂದುಕೊರತೆಗಳಿಗೆ ಸಂಬಂಧಸಿದಂತೆ ಕಾನೂನಾತ್ಮಕವಾಗಿ ನ್ಯಾಯವನ್ನು ಒದಗಿಸಲು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ನೀಡಿದ್ದು, ಪ್ರಸ್ತುತ ಆಯೋಗದ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿ ನಡೆಸುತ್ತಿರುವುದಿಂದ ಆರ್ಥಿಕ ಇಲಾಖೆರವರು ಆಯೋಗದಿಂದ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಿ ಹುದ್ದೆಗಳನ್ನು ಮಂಜೂರು ಮಾಡಲು ನಿರ್ದೇಶಿಸಿದೆ.

**(ಕ್ರಮ: ಆರ್ಥಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ)**

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಡಾ|| ಹೆಚ್.ಸಿ.ಮಹಾದೇವಪ್ಪ,
ಸಚಿವರು, ಸಮಾಜ ಕಲ್ಯಾಣ ಇಲಾಖೆ ಹಾಗೂ
ಮಾನ್ಯ ಅಧ್ಯಕ್ಷರು "ರಾಜ್ಯ ಮೇಲ್ವಿಚಾರಣಾ
ಸಮಿತಿ"

ಡಾ|| ಹೆಚ್.ಸಿ. ಮಹದೇವಪ್ಪ
ಸಮಾಜ ಕಲ್ಯಾಣ ಸಚಿವರು